**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.1749/2021**

ಸಿ.ಡಬ್ಲ್ಯು 02

ಪಿ.ಡಬ್ಲ್ಯು 03

ಸಾಕ್ಷಿದಾರರ ಹೆಸರು - **ಸಂಧ್ಯಾಶ್ರೀಧರ ಗುನಗಾ**

ಗಂಡನ ಹೆಸರು - **ಶ್ರೀಧರ ಗುನಗಾ**

ವಯಸ್ಸು - 35 ವರ್ಷ

ಉದ್ಯೋಗ - ಟೇಲರಿಂಗ್

ವಾಸ್ತವ್ಯ - ಹಿತ್ತಲಮಕ್ಕಿ

(ಇಂದು ದಿನಾಂಕಃ **05-06-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

**1.** ನನಗೆ ಚಾಸಾ 1 ಹಾಗೂ 2 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇರುವುದಿಲ್ಲ. ಪೊಲೀಸರು ನನ್ನನ್ನು Gas Cylinder ಕಳುವಾದ ಬಗ್ಗೆ ಸುಮಾರು 1 ವರ್ಷದ ಹಿಂದೆ ಹಿತ್ತಲಮಕ್ಕಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪಂಚನಾಮೆಗೆ ಸಹಿ ಮಾಡುವ ಸಲುವಾಗಿ ಬೆಳಿಗ್ಗೆ ಹೋಗಿರುತ್ತೇನೆ. ಅಲ್ಲಿ ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿಯನ್ನು ಮಾಡಿರುತ್ತೇನೆ.

**2.** ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಸದ್ರಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಗಳು **ಪಂಚನಾಮೆ ಹಾಗೂ ಕಚ್ಚಾ ನಕಾಶೆಯಾಗಿದ್ದು,** ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು 2 ಸಿ ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ 7 ಬಿ ಎಂದು ಗುರುತಿಸಲಾಯಿತು.

**3.** ಸಾಕ್ಷಿಗೆ ಒಂದು ಫೋಟೊವನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ಈಗಾಗಲೇ ನಿ.ಪಿ.3** ಎಂದು ಗುರುತಿಸಲಾಗಿರುತ್ತದೆ. ನಿಪಿ 3 ನ್ನು ಯಾವ ಸಂದರ್ಭದಲ್ಲಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**4.** ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ.

**5.** ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ 1 ನ್ನು ನೋಡಿ ಗುರುತಿಸಿರುವುದಿಲ್ಲ.

**6.** ಪೊಲೀಸರು ಇನ್ನೊಂದು ಬಾರಿ ನನ್ನನ್ನು ಶಾಲೆಗೆ ಬರಲು ಹೇಳಿದ್ದು, ಸದ್ರಿ ಸಂದರ್ಭದಲ್ಲಿ ನಾನು ಹೋಗಿರುತ್ತೇನೆ. ಪೊಲೀಸರ ಕೋರಿಕೆಯ ಮೇರೆಗೆ ಸದ್ರಿ ಸಂದರ್ಭದಲ್ಲಿಯೂ ಕೂಡ ಸಹಯನ್ನು ಹಾಕಿರುತ್ತೇನೆ.

**7.** ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಸದ್ರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ಪಂಚನಾಮೆಯಾಗಿದ್ದು**, ಅದನ್ನು ಈಗಾಗಲೇ **ನಿ.ಪಿ.4 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.4ಸಿ ಎಂದು** ಗುರುತಿಸಲಾಯಿತು.

**8.** ಸಾಕ್ಷಿಗೆ ಎರಡು ಭಾವಚಿತ್ರವನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ಈಗಾಗಲೇ ನಿ.ಪಿ.5 ಹಾಗೂ 6** ಎಂದುಗುರುತಿಸಲಾಗಿರುತ್ತದೆ.

9. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

1. **ದಿಃ 23/06/2021 ರಂದು** ಚಾ.ಸಾ.1 ರವರು ತೋರಿಸಿದಂತೆ ನನ್ನ ಹಾಗೂ ಚಾ.ಸಾ.3 ರವರ ಸಮಕ್ಷಮದಲ್ಲಿ ಸಂಜೆ **04–00** ರಿಂದ **05–00** ಗಂಟೆಯವರೆಗೆ ನಿ.ಪಿ.2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸಮಯದಲ್ಲಿ ಮು.ಮಾ.1 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ.1 ನ್ನು ವಶಪಡಿಸಿಕೊಂಡಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಿಃ 09/07/2021 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 3 ರವರನ್ನು ಪೊಲೀಸ ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರೊಂದಿಗೆ ಇದ್ದ 4 ಆರೋಪಿತರನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ ಆರೋಪಿತರು ತಾವು ಕಳುವು ಮಾಡಿದ ಜಾಗವನ್ನು ತೋರಿಸುವುದಾಗಿ ಹೇಳಿದಂತೆ ಪೊಲೀಸರು ಹಾಗೂ ನಮ್ಮನ್ನು ಆರೋಪಿತರೊಂದಿಗೆ ಜೀಪಿನಲ್ಲಿ ಗೋಕರ್ಣ ಠಾಣೆಯಿಂದ ಹೊರಟು ಗೋಕರ್ಣ ಮುಖ್ಯ ರಸ್ತೆಗೆ ತಲುಪಿದಾಗ ಮಾದನಗೇರಿಗೆ ವಾಹನವನ್ನು ಚಲಾಯಿಸಲು ಹೇಳಿದರು ಎಂದರೆ

ಸರಿಯಲ್ಲ. ನಂತರ ಹಿತ್ತಲಮಕ್ಕಿಯ ಕ್ರಾಸ್‌ನಿಂದ ವಾಹನವನ್ನು ಎಡಕ್ಕೆ ಬಂಕಿಕೊಡ್ಲ ರಸ್ತೆಯ ಕಡೆಗೆ ಚಲಾಯಿಸುವಂತೆ ತಿಳಿಸಿದ್ದು, ನಂತರ ವಾಹನವನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಲು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಆರೋಪಿತರು ವಾಹನದಿಂದ ಇಳಿದು ಒಂದು ಶಾಲೆಯ ಗೇಟನ್ನು ತೆಗೆದು ಒಳಕ್ಕೆ ಪ್ರವೇಶಿಸಿ ತಾವು ಕಳುವು ಮಾಡಿದ ಶಾಲೆ ಇದೆ ಎಂದು ತೋರಿಸಿದ್ದಾರೆ ಎಂದರೆ ಸರಿಯಲ್ಲ, ಸದ್ರಿ ಸಂದರ್ಭದಲ್ಲಿ ಚಾಸಾ 1 ರವರು ಅಲ್ಲಿ ಇದ್ದರು ಎಂದರೆ ಸರಿಯಲ್ಲ. ನಂತರ ಆರೋಪಿತಸರು ಸದ್ರಿ ಶಾಲೆಯ ಬಿಸಿಯೂಟದ ಕೋಣೆಯನ್ನು ತೋರಿಸಿ ಇದರ ಬೀಗವನ್ನು ನಾವು ಕಬ್ಬಿಣದ ರಾಡ ಹಾಗೂ ಕಬ್ಬಿಣದ ಸುತ್ತಿಗೆಯಿಂದ ಒಡೆದು ಕೋಣೆಯ ಒಳಗಡೆ ಹೋಗಿ ಕೋಣೆಯ ಉತ್ತರ ದಿಕ್ಕಿನ ಗೋಡೆಯ ಅಂಚಿನ ಸ್ಥಳವನ್ನು ತೋರಿಸಿ ತಾವು ಇಲ್ಲಿ Indane Gas Cylinder ನ್ನು ಕಳುವು ಮಾಡಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

**3.** ಈ ಕುರಿತಾಗಿ ನಿ.ಪಿ.4 ರಂತೆ 14–20 ಗಂಟೆಯಿಂದ 15–15 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ತಿಳಿದಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –2 ಹಾಗೂ 4ನೇ ಆರೋಪಿ ಪರ ಶ್ರೀ. ಬಿ. ಡಿ. ಎಸ್. ವಕೀಲರಿಂದ**

**1.** ನಾನು ಹಿತ್ತಲಮಕ್ಕಿಯ ಪ್ರಾಥಮಿಕ ಶಾಲೆಗೆ ಹೋಗಿದ್ದಾಗಲೀ ಅಥವಾ ಅಲ್ಲಿ ಸಹಿಯನ್ನು ಹಾಕಿದ್ದಾಗಲಿ ಇಲ್ಲ ಎಂದರೆ ಸರಿಯಲ್ಲ.

**C.W**. 02 **PW** 03

**(1 ಹಾಗೂ 3 ನೇ ಆರೋಪಿತರ ಪರ ವಕೀಲರು 2 ಹಾಗೂ 4ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುದಾಗಿ ತಿಳಿಸಿರುತ್ತಾರೆ.)**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ..ದಂ. ಕುಮಟಾ

**C.C.No.**1749/2021
**C.W.** 02 **PW** 03

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

**ಪಾಟೀ ಸವಾಲು –ಆರೋಪಿ ಪರ ಶ್ರೀ ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ